| ವಿಧಾನ ಪರಿಷತ್ತು | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : | 41 |
| ಸದಸ್ಯರ ಹೆಸರು : | ಶ್ರೀ ತಿಪ್ಪಣ್ಣಪ್ಪ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ : | 04-12-2023 |
| ಉತ್ತರಿಸುವವರು : | ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಅರಣ್ಯ ಇಲಾಖೆಯಲ್ಲಿ ಪ್ರತಿ ವರ್ಷ ಗಿಡ ನೆಡಲು ಸರ್ಕಾರ ಎಷ್ಟು ಮೊತ್ತ ಖರ್ಚು ಮಾಡುತ್ತಿದೆ; | 2022-23ನೇ ಸಾಲಿನಲ್ಲಿ ನೆಡುತೋಪು ಬೆಳೆಸಲು ಒಟ್ಟು ರೂ.363.424 ಕೋಟಿ ವೆಚ್ಚ ಭರಿಸಲಾಗಿರುತ್ತದೆ. |
| (ಆ) | ಇವುಗಳಲ್ಲಿ ಯಶಸ್ವಿಯಾದ ಮತ್ತು ಯಶಸ್ವಿಯಾಗದ ಗಿಡಗಳೆಷ್ಟು; ಈ ಪ್ಲಾಂಟೇಶನ್ ಕಾರ್ಯಕ್ರಮದಲ್ಲಿ ಅವ್ಯವಹಾರ ಆಗಿರುವುದು ಕಂಡುಬಂದಿದೆಯೇ; ಈ ಹಣ ಸದ್ಬಳಕೆಯಾಗಲು ಹಾಗೂ ಈ ಕಾರ್ಯಕ್ರಮ ಪರಿಣಾಮಕಾರಿಯಾಗಿ ಜಾರಿ ಮಾಡಲು ಅರಣ್ಯ ಇಲಾಖೆ ಮುಂದಿರುವ ಕಾರ್ಯಕ್ರಮಗಳೇನು? | ಸದರಿ ನೆಡುತೋಪುಗಳಲ್ಲಿ ಮೊದಲನೇ ಮತ್ತು ಎರಡನೇ ವರ್ಷದಲ್ಲಿ ನಿರ್ವಹಣೆ ಮಾಡುತ್ತಿರುವಂತಹ ನೆಡುತೋಪುಗಳು ಶೇ.90 ರಿಂದ ಶೇ.95 ರಷ್ಟು ಯಶಸ್ವಿಯಾಗಿರುತ್ತದೆ.<br><br>ಇನ್ನು 3ನೇ ವರ್ಷದ ನಿರ್ವಹಣೆಯ ನಂತರ ಮೌಲ್ಯಮಾಪನ ಕೈಗೊಳ್ಳಲಾಗುತ್ತದೆ. ಸದರಿ ಕಾರ್ಯಕ್ರಮದಲ್ಲಿ ಅವ್ಯವಹಾರ ಆಗಿರುವಂತಹ ಪ್ರಕರಣಗಳು ಯಾವುದು ವರದಿಯಾಗಿರುವುದಿಲ್ಲ.<br><br>ಅರಣ್ಯೀಕರಣ ಕಾರ್ಯಗಳನ್ನು ಪರಿಣಾಮಕಾರಿಯಾಗಿಸಲು ನೆಡುತೋಪುಗಳಲ್ಲಿ ಮಣ್ಣು ಮತ್ತು ತೇವಾಂಶ ಸಂರಕ್ಷಣೆ ಕೆಲಸಗಳು, ನೆಡುತೋಪುಗಳ ರಕ್ಷಣೆ ಮಾಡಲು ಸುತ್ತಲು ಸಂರಕ್ಷಣಾ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಕಾಮಗಾರಿಗಳಾದ ಜಾನುವಾರು ತಡೆ ಕಂದಕ, ಚೈನ್ ಲಿಂಕ್ ಮೆಷ್, ಮುಳ್ಳುತಂತಿ ಬೇಲಿ, ಕಾಂಪೌಂಡ್ ಗೋಡೆ ಇತ್ಯಾದಿ ಕಾಮಗಾರಿಗಳನ್ನು ಮತ್ತು ಬೆಂಕಿ ರಕ್ಷಣಾ ಕಾಮಗಾರಿಗಳನ್ನು ಪ್ರತಿ ವರ್ಷ ಹಮ್ಮಿಕೊಳ್ಳಲಾಗುತ್ತಿದೆ. |

ಸಂಖ್ಯೆ: FEE 124 FAP 2023

(ಈಶ್ವರ ಬಿ. ಖಂಡ್ರೆ)

**ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು**